ರಾಜ್ಯದಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅವ್ಯವಹಾರ

291 (660) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲಾ ಪಂಚಾಯಿತಿಗಳು ಕಳೆದ 2 ವರ್ಷಗಳ ಅವಧಿಯಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿರುವುದರಲ್ಲಿ ಮುಂಚೂಣಿಯಲ್ಲಿವೆ; ಈವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು;

ಆ) ಇದೇ ಅವಧಿಯಲ್ಲಿ ಯಾವ ಯಾವ ಜಿಲ್ಲಾ ಪರಿಷತ್‌ಗಳು ಈ ಯೋಜನೆಯ ಅನುಷ್ಠಾನದಲ್ಲಿ ಕಳಪೆ ಸಾಧನೆ ತೋರಿವೆ;

ಇ) ಕಳೆದ 2 ವರ್ಷಗಳಲ್ಲಿ ಯಾವ ಯಾವ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಮೇಲ್ಕಂಡ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರಗಳು/ದೂರುಗಳು ಮತ್ತು ಭ್ರಷ್ಟಾಚಾರಗಳ ಪ್ರಕರಣಗಳು ಪತ್ತೆಯಾಗಿವೆ;

ಈ) ಇಲ್ಲಿಯವರೆವಿಗೂ ಈ ಸಂಬಂಧವಾಗಿ ಎಷ್ಟು ಜನ ಅಧಿಕಾರಿಗಳ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಂಡಿದೆ;

ಉ) ಈ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರಗಳು/ದೂರುಗಳು ಹಾಗೂ ಭ್ರಷ್ಟಾಚಾರಗಳು ಪತ್ತೆಯಾದಲ್ಲಿ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳು ದೂರನ್ನು ಯಾರಿಗೆ ನೀಡುವ ವ್ಯವಸ್ಥೆ ಮಾಡಲಾಗಿದೆ;

ಊ) ಸರ್ಕಾರವು ಇದಕ್ಕಾಗಿ ಜಿಲ್ಲಾ ಮಟ್ಟಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವಿಶೇಷ ಕೋಶವನ್ನು ತೆರೆಯುವ ಬಗ್ಗೆ ಪರಿಶೀಲಿಸುವುದೇ; ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಯೋಜನೆಯ ಉದ್ದೇಶದ ಅನ್ವಯ ಎಲ್ಲಾ ನೋಂದಾಯಿತ ಕಾರ್ಮಿಕ ಕುಟುಂಬದವರಿಗೆ ಬೇಡಿಕೆ ಅನುಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ

ಉದ್ಯೋಗವನ್ನು ನೀಡಲಾಗುತ್ತಿದೆ. ಸದರಿ ಯೋಜನೆಯು ಒಂದು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿರುತ್ತದೆ. ಆದ ಕಾರಣ ಪ್ರತಿ ಜಿಲ್ಲೆಗಳು ಕೂಡ ಬೇಡಿಕೆಗೆ ಅನುಸಾರವಾಗಿ ಉತ್ತಮ ಪ್ರಗತಿಯನ್ನು ಸಾಧಿಸಿದ್ದು ಎಲ್ಲಾ ಜಿಲ್ಲೆಗಳು ಅನುಷ್ಠಾನದಲ್ಲಿ ಮುಂಚೂಣಿಯಲ್ಲಿರುತ್ತವೆ. ಪ್ರಸ್ತುತ ಸಾಲಿನಲ್ಲಿ ಈವರೆಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣ ಈ ಕೆಳಕಂಡಂತಿರುತ್ತದೆ.

	ಬಿಡುಗಡೆಯಾದ ಅನುದಾನ (ರೂ.ಕೋಟಿಗಳಲ್ಲಿ)
ಕೇಂದ್ರ	1903.08
ರಾಜ್ಯ	203.72

ಆ) ಈ ಯೋಜನೆಯ ಅನುಷ್ಠಾನದಲ್ಲಿ ಕಳಪೆ ಸಾಧನೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಮತ್ತು ಈ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಉ) ಕುಂದುಕೊರತೆಗಳ ನಿವಾರಣೆಗಾಗಿ ಪ್ರತ್ಯೇಕ ನಿಯಮಗಳು ಅಂದರೆ "ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದು–ಕೊರತೆ ನಿವಾರಣೆ) ನಿಯಮಗಳು, 2009" ನನ್ನು ರಚಿಸಿ ಅಧಿಸೂಚಿಸಲಾಗಿದೆ. ಸದರಿ ನಿಯಮಗಳ ಅನ್ವಯ ದೂರು ನೀಡಲು ವ್ಯವಸ್ಥೆಯನ್ನು ಮಾಡಲಾಗಿದೆ. ಇದರ ಸಂಬಂಧ ರಾಷ್ಟ್ರ ಮತ್ತು ರಾಜ್ಯಗಳ ಮಟ್ಟದಲ್ಲಿ ಸಹಾಯವಾಣಿಯನ್ನು ಕೂಡ ಸ್ಥಾಪಿಸಲಾಗಿದೆ.

ಊ) ಜಿಲ್ಲಾ ಮಟ್ಟದಲ್ಲಿ ದೂರುಗಳ ವಿಲೆಯ ಮೇಲ್ವಿಚಾರಣೆಗಾಗಿ ಕುಂದುಕೊರತೆಗಳ ನಿಯಮಗಳ ಅನ್ವಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯ ರಚಿಸಲಾಗಿರುತ್ತದೆ. ಸದರಿ ಸಮಿತಿಯು ನಿಯಮಿತವಾಗಿ: ದೂರುಗಳ ವಿಲೆಯ ಪ್ರಗತಿಯನ್ನು ಪರಿಶೀಲಿಸುತ್ತದೆ.

ಅನುಬಂಧ

ಮಹತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಳೆದ 2 ವರ್ಷಗಳಲ್ಲಿ (2008–09 ಹಾಗೂ 2009–10) ಪತ್ತೆಯಾಗಿರುವ ಹಣದುರುಪಯೋಗ ಮತ್ತು ಅವ್ಯವಹಾರ ಪ್ರಕರಣಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಪತ್ತೆಯಾಗಿರುವ ಪ್ರಕರಣಗಳ ಸಂಖ್ಯೆ	ಶಿಸ್ತು ಕ್ರಮ ಜರುಗಿಸುವ ಅಧಿಕಾರಿಗಳ ಸಂಖ್ಯೆ
1	ಬೀದರ್	7	18
2	ಚಿತ್ರದುರ್ಗ	19	38
3	ಧಾವಣಗೆರೆ	0	0
4	ಗುಲ್ಬರ್ಗಾ	3	3
5	ರಾಯಚೂರು	4	4
6	ಬೆಳಗಾಂ	3	3
7	ಬಳ್ಳಾರಿ	1	6
8	ಚಿಕ್ಕಮಗಳೂರು	0	0
9	ಹಾಸನ	1	1
10	ಕೊಡಗು	0	0
11	ಶಿವಮೊಗ್ಗ	7	7
12	ಬಾಗಲಕೋಟೆ	0	0
13	ಬೆಂಗಳೂರು (ನಗರ)	2	2
14	ಬೆಂಗಳೂರು (ಗ್ರಾ)	0	0
15	ಬಿಜಾಪುರ	2	2
16	ಚಾಮರಾಜನಗರ	0	0
17	ಚಿಕ್ಕಬಳ್ಳಾಪುರ	3	3
18	ದಕ್ಷಿಣ ಕನ್ನಡ	0	0
19	ಧಾರವಾಡ	2	2

20	ಗದಗ್	0	0
21	ಹಾವೇರಿ	5	5
22	ಕೋಲಾರ	4	4
23	ಕೊಪ್ಪಳ	0	0
24	ಮಂಡ್ಯ	7	7
25	ಮೈಸೂರು	4	4
26	ರಾಮನಗರ	0	0
27	ತುಮಕೂರು	4	4
28	ಉಡುಪಿ	0	0
29	ಉತ್ತರ ಕನ್ನಡ	0	0
30	ಯಾದಗಿರಿ	0	0
	ಒಟ್ಟು	**78**	**113**

ವಿದ್ಯಾರ್ಥಿಗಳ ಅನುಪಾತ ಮೇರೆಗೆ ಶಿಕ್ಷಕರನ್ನು ನಿಯೋಜಿಸುವುದು

292 (667) ಶ್ರೀ ಹೆಚ್.ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಚ್ಚುವರಿ ಶಿಕ್ಷಕರನ್ನು ಗುರ್ತಿಸುವಾಗ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಗುರುತಿಸುತ್ತಿದ್ದರೆ ಸರ್ಕಾರಿ ಶಾಲೆ ಮತ್ತು ಅನುದಾನಿತ ಖಾಸಗಿ ಶಾಲೆಗಳಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳಿಗೆ ಒಬ್ಬೊಬ್ಬ ಅಧ್ಯಾಪಕರು ಇರಬೇಕೆಂದು ಸರ್ಕಾರ ನಿಗದಿಪಡಿಸಿದೆ;

ಆ) ಈ ಆರ್ಥಿಕ ವರ್ಷದಲ್ಲಿ ಪ್ರೌಢಶಾಲೆ, ಪ್ರಾಥಮಿಕ ಶಾಲೆ ಹಾಗೂ ಅನುದಾನಿತ ಶಾಲೆಗಳ ಅಧ್ಯಾಪಕರ ಸಂಬಳ ಪ್ರತೀ ತಿಂಗಳು ಸಿಗದೆ ವಿಳಂಬವಾಗುತ್ತಿರುವುದು ನಿಜವೇ; ಕಾರಣಗಳೇನು;

ಇ) ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಮುಚ್ಚಿದ ಸರ್ಕಾರಿ ಶಾಲೆಗಳೆಷ್ಟು; ಇದಕ್ಕೆ ಕಾರಣಗಳೇನು?